**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.  ದಿನಾಂಕ : 19-02-2024.**

**ಪಾಟೀ ಸವಾಲು - 2 ನೇ ಎದುರುದಾರರ ಪರ ವಕೀಲರಿಂದ :**

**1)** ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದ ಎಲ್ಲರ ಪರವಾಗಿ ಎಂದರೆ ಹೇಮಾ ಮಂಜುನಾಥ್, ಶಿವಕುಮಾರ್ ಮತ್ತು ಶೇಖರ್ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ. ಭೂ ಸ್ವಾಧೀನಗೊಂಡ ಸ್ವತ್ತಿನ ಸರ್ವೆ ಸಂಖ್ಯೆ 51-1 ಆಗಿರುತ್ತದೆ. ಸದರಿ ಸ್ವರ್ವೆ ಸಂಖ್ಯೆ ಒಟ್ಟು 2 ಎಕರೆ ಇತ್ತು. ಸದರಿ ಸ್ವತ್ತು ಕೃಷಿ ಭೂಮಿಯಾಗಿತ್ತು. ವ್ಯವಸಾಯ ಮಾಡುತ್ತಿದ್ದೆವು ಎಂದರೆ ಸರಿ. ಸದರಿ ಸ್ವತ್ತನ್ನು ನಾವು ಯಾವತ್ತೂ ಭೂ ಪರಿವರ್ತನೆ ಮಾಡಿಸಿರಲಿಲ್ಲ ಎಂದರೆ ಸರಿ. ಸದರಿ ಸ್ವತ್ತು ಬಂಜರು ಭೂಮಿಯಾಗಿದ್ದು, ಅಲ್ಲಿ ನಾವು ವ್ಯವಸಾಯ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನಿ.ಪಿ.4 ರ ಪ್ರಕಾರ ಪ್ರತೀ ಎಕರೆಗೆ 40 ಲಕ್ಷ ರೂಪಾಯಿ ಮಾತ್ರ ಇತ್ತು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಪ್ರತೀ ಎಕರೆ 5 ಕೋಟಿ ರೂಪಾಯಿ ಇದೆ ಎಂದು ನುಡಿಯುತ್ತೇನೆ. ಸದರಿ ಸ್ಥಳದಲ್ಲಿ ಈವತ್ತಿಗೂ ಸಹ ಪ್ರತೀ ಎಕರೆಗೆ 5 ಕೋಟಿ ರೂಪಾಯಿ ಇಲ್ಲ ಎಂದರೆ ಸರಿಯಲ್ಲ. ಪ್ರತೀ ಎಕರೆಗೆ 5 ಕೊಟಿ ರೂಪಾಯಿ ಮೌಲ್ಯ ಇದೆ ಎಂದು ತೋರಿಸಲು ನಾನು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಎಲ್.ಎ.ಸಿ.ಸಂಖ್ಯೆ 2/2017 ಬೇರೆ ಗ್ರಾಮಕ್ಕೆ ಸೇರಿದ ಪ್ರಕರಣ ಆಗಿದ್ದು, ನಮ್ಮ ಗ್ರಾಮಕ್ಕೆ ಸಂಬಂಧಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಕರಣ ಭೂ ಪರಿವರ್ತನೆ ಆದ ಜಮೀನಿಗೆ ಸಂಬಂಧಿಸಿದ್ದು ಕೃಷಿ

ಭೂಮಿಗೆ ಸಂಬಂಧಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಕೇಳಿದ ಪ್ರಾರ್ಥನೆಗೆ ಪೂರಕವಾದ ದಾಖಲೆಗಳನ್ನು ಒದಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾಣೆಯ ಪ್ಯಾರಾ ಸಂಖ್ಯೆ 5 ಮತ್ತು 6 ರಲ್ಲಿ ಸುಳ್ಳು ಮಾಹಿತಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**